# ಪ್ಯಾಲೇಸ್ ಸೊಸೆ

ಮೇಘನ್ ಮಾರ್ಕಲ್ ಕೊನೆಗೂ ಅರಮನೆಯಿಂದ ಹೊರಗೆ ಬಂದಿದ್ದಾರೆ. ಇಂಗ್ಲೆಂಡಿನ ಅರಸೊತ್ತಿಗೆಯ ಕುಡಿ, ರಾಜಕುವರ ಹ್ಯಾರಿಯನ್ನು ಮದುವೆಯಾಗಿ ಅರಮನೆ ಸೇರಿ ಇನ್ನೂ ಸರಿಯಾಗಿ ಎರಡು ವರ್ಷವಾಗಿಲ್ಲ, ಆಗಲೇ ಮೇಘನ್‌ಗೆ ಅರಮನೆ ಬೇಸರವಾಗಿದೆ! ಪ್ರಿನ್ಸ್ ಹ್ಯಾರಿ, ಮೇಘನ್ ಮತ್ತು ಮಗು ಆರ್ಚಿ ಮೌಂಟ್‌ಬ್ಯಾಟನ್, ಅರಮನೆಯನ್ನು ತೊರೆದು ಕೆನಡಾದ ಸಮುದ್ರತೀರದ ಬಂಗಲೆಗೆ ಬಂದಿಳಿದಿದ್ದಾರೆ. ಇನ್ನು ಸ್ವತಂತ್ರ ಪ್ರಜೆಗಳಾಗಿ ಅಲ್ಲೇ ಅವರ ವಾಸ. ಹೆಂಡತಿ, ಮಗುವಿನೊಡನೆ ಅರಮನೆ ಬಿಟ್ಟು ಬರುವ ಮುನ್ನ ಸುದ್ದಿಗಾರರ ಜೊತೆ ಮಾತನಾಡಿರುವ ಹ್ಯಾರಿ, 'ಇದು ಬಿಟ್ಟು ನನಗೆ ಬೇರೆ ದಾರಿಯೇ ಇರಲಿಲ್ಲ' ಎಂದಿದ್ದಾನೆ. ಅದರರ್ಥ ಸ್ಪಷ್ಟ– ಪ್ರೀತಿಸಿ ಮದುವೆಯಾದ ಹೆಂಡತಿಯನ್ನು ಬಿಟ್ಟು ಆತ ಇರಲಾರ. ಅವಳ ಆಸೆಯೇ ಆತನ ಆಸೆ. ಬಕಿಂಗ್‌ಹ್ಯಾಮ್ ಅರಮನೆಗೆ ಈ ವಿದ್ಯಮಾನವನ್ನು ಹೇಗೆ ಜೀರ್ಣಿಸಿಕೊಳ್ಳುವುದೋ ಗೊತ್ತಾಗುತ್ತಿಲ್ಲ.

ಹಾಗೆ ನೋಡಿದರೆ 2018ರ ಜುಲೈನಲ್ಲಿ ಹ್ಯಾರಿ ಮತ್ತು ಮೇಘನ್ ಮದುವೆಯಾದಾಗ ಅರಮನೆ ಈ ಮದುವೆಯನ್ನು ಒಪ್ಪಿಕೊಂಡದ್ದೇ ದೊಡ್ಡ ಸಂಗತಿ ಎನ್ನುವುದು ರಾಜಮನೆತನದವರ ಪಿಸುಗುಟ್ಟುವಿಕೆ. ಮೇಘನ್ ಅಮೆರಿಕದ ಲಾಸ್‌ಏಂಜಲಿಸ್ ಸಂಜಾತೆ, ಟೀವಿ ನಟಿ ಮತ್ತು ಮಾಡೆಲ್. ತಾಯಿ ಯೋಗ ಶಿಕ್ಷಕಿ. ತಂದೆ ಟಿವಿಯಲ್ಲಿ ಫೋಟೊಗ್ರಫಿ ಮತ್ತು ಲೈಟಿಂಗ್ ನಿರ್ದೇಶಕ. ತಾಯಿ ಆಫ್ರೊ–ಅಮೆರಿಕನ್, ತಂದೆ ಬಿಳಿಯ. ಬಾಲ್ಯದಿಂದಲೇ ಮಿಶ್ರಬಣ್ಣದ ಗುಂಪಿಗೆ ಸೇರಿ ಮಾನಸಿಕ ನೋವು ಅನುಭವಿಸಿದಾಕೆ ಮೇಘನ್. ಆಕೆ ಹುಟ್ಟಿ 6ನೇ ವಯಸ್ಸಿನಲ್ಲೇ ತಂದೆ–ತಾಯಿ ಡೈವೋರ್ಸ್ ಹೊಂದಿ ಬೇರೆಯಾಗಿದ್ದರು. ಸಣ್ಣ ಪುಟ್ಟ ಪಾತ್ರಗಳಲ್ಲಿ ಟಿವಿಯಲ್ಲಿ ನಟಿಸುತ್ತಾ, ಬಿಡುವಿನ ವೇಳೆಯಲ್ಲಿ ಕ್ಯಾಲಿಗ್ರಾಫರ್, ಬುಕ್ ಬೈಂಡರ್ ಕೆಲಸ ಮಾಡಿಕೊಂಡು ಜೀವನದ ಕಷ್ಟ ಉಂಡವಳು. ಟೀವಿಯಲ್ಲೂ 'ಆಕೆ ಬಿಳಿಯೂ ಅಲ್ಲ, ಕಪ್ಪೂ ಅಲ್ಲ' ಅನ್ನುವ ಕಾರಣಕ್ಕಾಗಿ ಸೂಕ್ತ ಪಾತ್ರಗಳು ಸಿಗುತ್ತಿರಲಿಲ್ಲ. 2011ರಲ್ಲಿ ಯುಎಸ್‌ಎ ನೆಟ್‌ವರ್ಕ್‌ನ 'ಸೂಟ್ಸ್' ಧಾರಾವಾಹಿಯಲ್ಲಿ ಪ್ರಮುಖ ಪಾತ್ರ ಸಿಗುವವರೆಗೂ ಆಕೆ ಹೊಟ್ಟೆಪಾಡಿಗೂ ಕಷ್ಟಪಡುತ್ತಿದ್ದಳು.

11ರ ಎಳೆವಯಸ್ಸಿನಲ್ಲೇ 'ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್' ಉತ್ಪನ್ನಕ್ಕೆ ರೂಪದರ್ಶಿಯಾಗಿದ್ದವಳು ಮೇಘನ್. ಫ್ಯಾಷನ್ ಡಿಸೈನರ್ ಆಗಿ ಮುಂದೆ ಒಳ್ಳೆಯ ಹೆಸರು ಗಳಿಸಿದಳು. 2015ರಲ್ಲಿ ಕೆನಡಾ ಕ್ಲಾಥಿಂಗ್ ಕಂಪನಿಗೆ ತನ್ನದೇ ಆದ ರೀಟ್‌ಮ್ಯಾನ್ಸ್ ಕ್ಲಾಥಿಂಗ್ ಮಾಡಿಕೊಟ್ಟದ್ದು ಜನಪ್ರಿಯವಾಯಿತು. ಸಿನಿಮಾಗಳಲ್ಲೂ ಅಭಿನಯಿಸಿದಳು. ಆದರೆ ವೈಯಕ್ತಿಕ ಜೀವನದಲ್ಲಿ ಆಕೆಯ ಆಯ್ಕೆಗಳು ಯಶ ಕಾಣಲಿಲ್ಲ. ನಟ, ನಿರ್ಮಾಪಕ ಟ್ರೆವರ್ ಎಂಗೆಲ್ಸನ್ ಜೊತೆಗೆ 2011ರಲ್ಲಿ ಮದುವೆಯಾದದ್ದು ಎರಡು ವರ್ಷವೂ ಬಾಳಿಕೆ ಬರಲಿಲ್ಲ. ಆ ಬಳಿಕ ರೆಸ್ಟೋರೆಂಟ್ ಮಾಲೀಕ, ಜನಪ್ರಿಯ ಶೆಫ್ ಕೂಡಾ ಆಗಿದ್ದ ಗೆಳೆಯನೊಬ್ಬನ ಜೊತೆಗೆ ಕೂಡಿಕೆ ಮಾಡಿದ್ದೂ ಬೇಗನೇ ಕಿತ್ತುಹೋಯಿತು.

2017ರಲ್ಲಿ ಹ್ಯಾರಿ ಜೊತೆಗೆ ಸ್ನೇಹವಾದದ್ದೂ ಒಂದು 'ಬ್ಲೈಂಡ್ ಡೇಟಿಂಗ್' ಕಾರ್ಯಕ್ರಮದಲ್ಲಿ. ಆದರೆ ಈ ಸ್ನೇಹ ಗಟ್ಟಿಯಾಗಿ ಪ್ರೀತಿಗೆ ತಿರುಗಿತು. ಅರಮನೆಯ ಸೊಸೆಯಾಗುವುದು ಮೇಘನ್‌ಗೆ ಕಷ್ಟದ ಕೆಲಸವೇ ಆಗಿತ್ತು. ಬಾಲ್ಯದಿಂದಲೂ ಸ್ವತಂತ್ರ ವ್ಯಕ್ತಿತ್ವ ಬೆಳೆಸಿಕೊಂಡಿದ್ದ ಸ್ತ್ರೀವಾದಿ ಆಕೆ. ಅರಮನೆಯ ರೀತಿ ರಿವಾಜುಗಳಿಗೆ ಅದರದ್ದೇ ಆದ ನಿಯಮಗಳಿದ್ದವು. ಮೇಘನ್ ನಟನೆಯ ವೃತ್ತಿ ಬಿಡಲು ಒಪ್ಪಿಕೊಂಡಳು. ಅರಮನೆಯ ರೀತಿ ರಿವಾಜುಗಳನ್ನೂ ಕಲಿತಳು. ಮದುವೆಯ ದಿನ ಇಂಗ್ಲೆಂಡ್ ಚರ್ಚಿನ ಪುರೋಹಿತರು ಜೋರ್ಡಾನ್ ನದಿಯ ನೀರು ಪ್ರೋಕ್ಷಿಸಿ ಆಕೆಗೆ ಯಾಜಕಸ್ನಾನ ಮಾಡಿಸಿದ್ದರು. ಆದರೆ ಈಗ ಎಲ್ಲವೂ ವ್ಯರ್ಥ ಕಸರತ್ತಿನಂತೆ ಕಾಣಿಸುತ್ತಿದೆ.

ಇನ್ನು ಮುಂದೆ ಹ್ಯಾರಿ ಮತ್ತು ಮೇಘನ್‌ಗೆ 'ಹಿಸ್ ಹೈನೆಸ್' ಮತ್ತು 'ಹರ್ ಹೈನೆಸ್' ಅನ್ನುವಂತಿಲ್ಲ. ಇದುವರೆಗೆ ನಡೆದಂತೆ ಅವರು ಓಡಾಡಿದ್ದಕ್ಕೆಲ್ಲ ಅರಮನೆಯ ಬೊಕ್ಕಸದಿಂದ ಖರ್ಚು ಮಾಡುವಂತಿಲ್ಲ. ಸದ್ಯಕ್ಕೆ ಈ ಬಂಗಲೆ ಅವರ ಲಂಡನ್ ವಾಸಸ್ಥಾನವಾಗಿ ಉಳಿಯಲಿದೆ. ಆದರೆ ಯಾವುದೇ ರಾಜಮರ್ಯಾದೆಗಳು ಇರುವುದಿಲ್ಲ.

ಅರಮನೆ ಬಿಟ್ಟ ಬಳಿಕ ಹೊರಗೆ ಸ್ವತಂತ್ರ ಪ್ರಜೆಗಳಾಗಿ ಬದುಕುವುದು ಅಷ್ಟು ಸುಲಭವಲ್ಲ. ಕೆನಡಾದಲ್ಲಿ ಬಂದಿಳಿದ ಬಳಿಕ ಮಗನ ಜೊತೆಗೆ ಸಾರ್ವಜನಿಕ ಉದ್ಯಾನದಲ್ಲಿ ಕುಳಿತಿದ್ದ ಆಕೆಯ ಫೋಟೊ ಟ್ಯಾಬ್ಲಾಯ್ಡ್‌ಗಳಲ್ಲಿ ಪ್ರಕಟವಾಗಿದೆ. ತನ್ನ ಅನುಮತಿ ಇಲ್ಲದೆ ಫೋಟೊ ತೆಗೆದದ್ದಕ್ಕೆ ಆಕೆ ಆ ಪತ್ರಿಕೆಗೆ ವಕೀಲರ ನೋಟೀಸ್ ಕಳಿಸಿದ್ದಾರೆ. ಲಂಡನ್ನಿನ ಮನೆ ಫ್ರಾಗ್‌ಮೋರ್ ಕಾಟೇಜ್ ರಿಪೇರಿಗೆಂದು ಬೊಕ್ಕಸದಿಂದ ಖರ್ಚು ಮಾಡಿದ್ದ 24 ಲಕ್ಷ ಪೌಂಡ್ ಹಣವನ್ನು ಬೊಕ್ಕಸಕ್ಕೆ ಮರಳಿಸಬೇಕೆಂದು ರಾಣಿ ಎಲಿಜಬೆತ್ ಈಗಾಗಲೇ ಸೂಚನೆ ನೀಡಿದ್ದಾರೆ. ಈ ಮಧ್ಯೆ ಅಮೆಜಾನ್ ಮಾದರಿಯಲ್ಲಿ ತಮ್ಮದೇ ಆದ ಹೊಸ ಮಾರಾಟ ಜಾಲತಾಣವೊಂದನ್ನು 'ಸಸೆಕ್ಸ್ ರಾಯಲ್ ಬ್ರ್ಯಾಂಡ್' ಟ್ರೇಡ್‌ಮಾರ್ಕ್‌ನಲ್ಲಿ ಆರಂಭಿಸುವ ಅವರ ಯೋಜನೆಗೆ ಆಸ್ಟ್ರೇಲಿಯಾದ ಡಾಕ್ಟರನೊಬ್ಬ ಕೋರ್ಟಿನಲ್ಲಿ ಆಕ್ಷೇಪ ಸಲ್ಲಿಸಿದ್ದಾನೆ. ಅಡ್ಡಿಗಳು ಏನೇ ಇರಲಿ, ಅರಮನೆ ಬಿಟ್ಟು ಬಂದ ಹ್ಯಾರಿ– ಮೇಘನ್ ಅವರದ್ದೇ ಆದ ಅಭಿಮಾನಿಗಳನ್ನೂ ಹೊಂದಿದ್ದಾರೆ.

■ ಹನಿ



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65